**Code No. 18 Z**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಶೀಘ್ರಲಿಪಿ – ಪ್ರೌಢ ದರ್ಜೆ – ತೃತೀಯ ಪತ್ರಿಕೆ

# (ಸೂತ್ರಗಳು ಮತ್ತು ಸಂಕ್ಷೇಪಿಸುವಿಕೆ)

ಜನವರಿ, 2019 | ಸಮಯ : 2½ ಗಂಟೆಗಳು

ಅಂಕಗಳು : 100

***ಸೂಚನೆ :*** ಉತ್ತರಗಳು ಸಂಕ್ಷಿಪ್ತ ಹಾಗೂ ಸಮಂಜಸವಾಗಿರಬೇಕು.

I. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಒಂದಕ್ಕೆ*** ಮಾತ್ರ ಉತ್ತರಿಸಿ : 1 × 15 = 15

(ಅ) ಶೀಘ್ರಲಿಪಿಯಲ್ಲಿ 'ಹ' ವ್ಯಂಜನದ ಪ್ರಯೋಗವನ್ನು ಉದಾಹರಣೆಯೊಂದಿಗೆ ವಿವರಿಸಿ.

***ಅಥವಾ***

(ಆ) ಶೀಘ್ರಲಿಪಿಯಲ್ಲಿ ಅಧೋಮುಖ ಮತ್ತು ಊರ್ಧ್ವಮುಖ 'ರ' ರೇಖಾಕ್ಷರಗಳ ಸೂತ್ರವನ್ನು ಉದಾಹರಣೆ ಸಹಿತ ವಿವರಿಸಿ.

II. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಮೂರಕ್ಕೆ*** ಟಿಪ್ಪಣಿ ಬರೆಯಿರಿ : 3 × 5 = 15

(ಅ) ಬಲರೂಪದ 'ತ' ಮತ್ತು 'ದ' ಉಪಯೋಗ

(ಆ) ಸ್ತ ಮತ್ತು ಷ್ಟ ಕುಣಿಕೆಗಳು

(ಇ) ರೇಖಾಕ್ಷರಗಳ ಸಂಯೋಜನಾ ಸೂತ್ರ

(ಈ) ಇಮ್ಮಡಿ ರೇಖಾಕ್ಷರದ ಅಂತ್ಯಪ್ರತ್ಯಯಗಳು

(ಉ) ಆದಿಯಲ್ಲಿ ದೊಡ್ಡ ವೃತ್ತ

III. ಈ ಕೆಳಗೆ ನೀಡಿರುವ ಯಾವುದಾದರೂ ***ಐದು*** ಪದಗಳಿಗೆ ಶೀಘ್ರಲಿಪಿ ಸೂತ್ರಗಳೊಂದಿಗೆ ಸಂಕ್ಷಿಪ್ತ ಅಕ್ಷರಗಳನ್ನು ಬರೆಯಿರಿ : 5 × 2 = 10

(ಅ) ವ್ಯಾಪಕ

(ಆ) ಮಳೆಬೆಳೆ

(ಇ) ರಸೀತಿ

(ಈ) ಮೀರುವಂತೆ

(ಉ) ಪರವಾಗಿ

(ಊ) ಲಂಕೆ

(ಋ) ಪವಾಡಗಳು

IV. ಈ ಕೆಳಗಿನ ನೀಡಿರುವ ಪದಗಳಿಗೆ ಸಂಕ್ಷಿಪ ರೂಪಗಳನ್ನು ಬರೆಯಿರಿ : 5 × 1 = 5

(ಅ) ದೈವ ಸಂಕಲ್ಪ

(ಆ) ಮಂತ್ರಿ ಮಂಡಲ

(ಇ) ಪಂಚವಾರ್ಷಿಕ ಯೋಜನೆ

(ಈ) ಉದ್ಧಟತನ

(ಉ) ಅಂಗವಿಕಲ

V. ಈ ಕೆಳಗಿನ ನೀಡಿರುವ ಪದಗಳಿಗೆ ಪದಸಮೂಹಗಳನ್ನು ಬರೆಯಿರಿ : 5 × 1 = 5

(ಅ) ಅತ್ಯಂತ ವಿಷಾದಕರ

(ಆ) ಏಕಸದಸ್ಯ ಆಯೋಗ

(ಇ) ಕನ್ನಡ ಪ್ರದೇಶ

(ಈ) ಜಂಟಿ ಸಮ್ಮೇಳನ

(ಉ) ಕಾಯಾ ವಾಚಾ ಮನಸಾ

VI. ಈ ಕೆಳಗೆ ಕೊಟ್ಟಿರುವ ವಿಷಯವನ್ನು ಪರೋಕ್ಷ ವಿಧಾನದಲ್ಲಿ 500 ಅಕ್ಷರಗಳಿಗೆ ಮೀರದಂತೆ ಸಂಕ್ಷೇಪಿಸಿ ಬರೆಯಿರಿ : 50

ಕರ್ನಾಟಕ ವಿಧಾನ ಸಭೆಯಲ್ಲಿ ಮಂಡಿಸಿದ್ದ ಪ್ರಸಕ್ತ ವರ್ಷದ ಆಯವ್ಯಯ ಪತ್ರದ ಬಗ್ಗೆ ಸದಸ್ಯರ ಚರ್ಚೆಗೆ ಉತ್ತರವಾಗಿ ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಮಾಡಿದ ಭಾಷಣ.

ಮಾನ್ಯ ಅಧ್ಯಕ್ಷರೇ,

ನಾನು ನಮ್ಮ ನೂತನ ರಾಜ್ಯ ಸರ್ಕಾರದ ಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿಯಾಗಿ ಪ್ರಸಕ್ತ ಸಾಲಿನ ಆಯವ್ಯಯ ಮುಂಗಡ ಪತ್ರವನ್ನು ಕಳೆದ ವಾರ ಈ ಸಭೆಯಲ್ಲಿ ಸದಸ್ಯರ

ಅವಗಾಹನೆಗೆ ಮಂಡನೆ ಮಾಡಿದ್ದೇನ. ಈ ಬಜೆಟ್ ಮಂಡಿಸಿದ ನಂತರದ ಹತ್ತು ದಿನಗಳಲ್ಲಿ ಈ ಸದನದ ಆಡಳಿತ ಪಕ್ಷದ ಸದ್ಯರು ಮತ್ತು ವಿರೋಧ ಪಕ್ಷಗಳ ಸದಸ್ಯರು ಈ ಬಜೆಟ್ ಅಂದಾಜಿನಲ್ಲಿರುವ ಹಲವಾರು ವಿಚಾರಗಳ ಬಗ್ಗೆ ಬಹಳ ಕೂಲಂಕುಷವಾಗಿ ಚರ್ಚಿಸಿ, ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಹಾಗೆಯೇ ಕೆಲವೊಂದು ತಿದ್ದುಪಡಿಗಳಿಗ ಸಲಹೆಗಳನ್ನು ಸಹ ಸೂಚಿಸಿದ್ದಾರೆ. ಇವುಗಳನ್ನು ಅಳವಡಿಸಿಕೊಂಡು ಮಾರ್ಪಾಡು ಮಾಡಿ ಅನಷ್ಠಾನಗೊಳಿಸಲಾಗುವುದೆಂದು ಮಾನ್ಯ ಸದಸ್ಯ ಮಿತ್ರರಿಗೆ ನಾನು ಭರವಸೆಯನ್ನು ಕೊಡುತ್ತೇನೆ.

ಪ್ರಥಮವಾಗಿ ಅನೇಕ ಸದಸ್ಯ ಮಿತ್ರರು ರಾಜ್ಯ ರೈತರ ಬಗ್ಗೆ ಬಜೆಟ್‌ನಲ್ಲಿ ಹೆಚ್ಚು ಪ್ರೋತ್ಸಾಹ ಕಾರ್ಯಕ್ರಮಗಳಿಲ್ಲವೆಂದೂ, ಅದರ ಬಗ್ಗೆ ಗಮನಹರಿಸಬೇಕೆಂದು ಹೇಳಿದ್ದಾರೆ. ನಾವು ಚುನಾವಣೆಗೆ ಹೋದಾಗ ಮೊದಲು ಆದ್ಯತೆಯನ್ನು ಈ ನಾಡಿನ ಬೆನ್ನೆಲುಬಾದ ರೈತನ ಸಂಕಷ್ಟ ಪರಿಹರಿಸಲು ಬದ್ಧರಿದ್ದೇವೆಂದು ಹೇಳಿದ್ದೆವು. ಅದರಂತೆ ಈ ಬಜೆಟ್‌ನಲ್ಲಿ ಹಲವಾರು ರಿಯಾಯ್ತಿಗಳನ್ನು ಹಾಗೂ ರೈತರ ಬಳಿಗೆ ತಕ್ಕಂತೆ ಅನುಕೂಲಕರವಾದ ಕೃಷಿ ಆಧಾರಿತ ಯೋಜನೆಗಳನ್ನು ಪ್ರಕಟಿಸಿ ಅದಕ್ಕೆ ಸಾಕಷ್ಟು ಹಣವನ್ನು ತೆಗೆದಿಟ್ಟಿದ್ದೇವೆ. ಮುಖ್ಯವಾಗಿ ಕಳೆದ ಎರಡು ವರ್ಷಗಳ ಕಾಲ ರಾಜ್ಯವನ್ನು ಮಳೆಯಿಲ್ಲದೆ ಬರಗಾಲ ಕಾಡಿತ್ತು. ಇದರಿಂದ ನಮ್ಮ ರೈತಾಪಿ ವರ್ಗ ಸಾಕಷ್ಟು ಸಂಕಷ್ಟವನ್ನು ಅನುಭವಿಸಿತು. ಇದನ್ನು ಗಮನದಲ್ಲಿಟ್ಟುಕೊಂಡು ರೈತರಿಗೆ ಬೀಜ ಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ ಸರ್ಕಾರದ ಕೃಷಿ ಇಲಾಖೆ ಹಾಗೂ ಇದರ ಅಂಗಸಂಸೆಗಳ ಮೂಲಕ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ರೈತರು ಸಹಕಾರ ಸಂಘಗಳಿಂದ ಪಡೆದ ಸಾಲಗಳ ಮೇಲಿನ ಬಡ್ಡಿಯನ್ನು ನಮ್ಮ ಸರ್ಕಾರವು ಮನ್ನಾ ಮಾಡಿದ್ದು ಸಣ್ಣ ಮತ್ತು ಅತಿ ಸಣ್ಣ ರೈತರ ಸಣ್ಣ ಪುಟ್ಟ ಸಾಲಗಳನ್ನು ಅಸಲು ಸಹಿತ ಮನ್ನಾ ಮಾಡುವ ಬಗ್ಗೆ ಇರುವ ಕಾನೂನಿನ ತೊಡಕು ಹಾಗೂ ಸಾಲ ಪಡೆದ ಇಂತಹ ರೈತರ ಸಂಖ್ಯೆ ಬಗ್ಗೆ ಅಧ್ಯಯನ ಮಾಡಲು ಸರ್ಕಾರವು ತಜ್ಞರ ಸಮಿತಿಯೊಂದನ್ನು ಶೀಘ್ರವಾಗಿ ನೇಮಿಸಿ, ಅದರ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಹಾಗೂ ರೈತರ ಬೆಳೆಗಳಿಗೆ ವಿಮಾ ಯೋಜನೆಯನ್ನು ಸಹ ಈ ವರ್ಷ ಜಾರಿಗೆ ತರುತ್ತೇವೆಂದು ಈ ಸದನಕ್ಕೆ ತಿಳಿಸಬಯಸುತ್ತೇನೆ.

ಇನ್ನು ಶಿಕ್ಷಣದ ಕ್ಷೇತ್ರದ ಬಗ್ಗೆ ವಿಧಾನ ಸಭೆಯ ಮಾನ್ಯ ಸದಸ್ಯರೊಬ್ಬರು ಹೇಳುತ್ತಾ, ಪ್ರಸಕ್ತ ಸಾಲಿನ ಬಜೆಟ್ಟಿನಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಹಣವನ್ನು ಒದಗಿಸಿಕೊಟ್ಟಿಲ್ಲವೆಂದು ಹೇಳಿದ್ದಾರೆ.

ಬಹುಶಃ ಮಾನ್ಯ ಮಿತ್ರರು ಕಳೆದ ವರ್ಷಗಳಲ್ಲಿ ಈ ಬಾಬ್ತಿಗೆ ಒದಗಿಸಿರುವ ಹಣಕಾಸಿಗೆ ಮೊಬಲಗಿನ ಬಗ್ಗೆ ತುಲನಾತ್ಮಕವಾಗಿ ನೋಡಿಲ್ಲವೆಂದು ಭಾವಿಸುತ್ತೇವೆ. ಕಳೆದ ವರ್ಷ ಒದಗಿಸಿದ್ದ ಹಣಕ್ಕಿಂತ ಈ ಬಾರಿ ಶೇಕಡ ಮೂವತ್ತರಷ್ಟು ಹೆಚ್ಚಿಗೆ ನಾವು ಈ ಬಜೆಟ್ಟಿನಲ್ಲಿ ಮೀಸಲಿಟ್ಟಿರುತ್ತೇವೆ. ಅಲ್ಲದೆ, ಮಕ್ಕಳು ಶಾಲೆಗೆ ಉತ್ಸಾಹದಿಂದ ಬರಲೆಂದು ಉದ್ದೇಶದಿಂದ ಕಳೆದ ವರ್ಷ ಆರಂಭಿಸಲಾಗಿದ್ದ ಅಕ್ಷರ ದಾಸೋಹ ಬಿಸಿಯೂಟದ ಕಾರ್ಯಕ್ರಮವನ್ನು ಪ್ರೌಢಶಾಲಾ ಮಟ್ಟದವರೆಗೆ ವಿಸ್ತರಿಸಿದ್ದೇವೆ. ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವುದರ ಜೊತೆಗೆ ಈ ವರ್ಷ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಐದು ಸಾವಿರ ಹೊಸ ಶಿಕ್ಷಕರ ನೇಮಕಾತಿಗೂ ಕೂಡ ಈ ಬಜೆಟ್ಟಿನಲ್ಲಿ ಮಂಜೂರಾತಿ ನೀಡಿರುವುದನ್ನು ಮಾನ್ಯ ಸದಸ್ಯರು ಗಮನಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಇನ್ನು ನಿರುದ್ಯೋಗ ಸಮಸ್ಯೆಯ ವಿಷಯ ಇಂದು ದೇಶದಲ್ಲಿ ಜನಸಂಖ್ಯೆ ಅತಿ ವೇಗವಾಗಿ ಬೆಳೆಯುತ್ತಿರುವುದರಿಂದ ಎಷ್ಟೇ ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡಲು ಪ್ರಯತ್ನ ಪಟ್ಟರೂ ಸಹ ಈ ಸಮಸ್ಯೆ ಪರಿಹಾರವಾಗಿಲ್ಲ. ಕೇಂದ್ರ ಸರ್ಕಾರವು ಇತ್ತೀಚೆಗೆ ನಿರುದ್ಯೋಗ ಸಮಸ್ಯೆಯ ವಿಚಾರವಾಗಿ ಒಂದು ಹೊಸ ಯೋಜನೆಯನ್ನು ಕೈಗೊಂಡಿದೆ. ಇದರ ಜೊತೆಗೆ ನಮ್ಮ ಸರ್ಕಾರವು ಸಹ ಹೊಸದಾಗಿ ಹೆಚ್ಚು ಹೆಚ್ಚು ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದರ ಮೂಲಕ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡಲು ಹೊರಟಿರುವುದು ಅತಿ ಸಂತೋಷಕರವಾದ ಸಂಗತಿ. ಈ ಹೊಸ ಹೊಸ ಕಾರ್ಖಾನೆಗಳು ಆದಷ್ಟು ಬೇಗನೆ ಪ್ರಾರಂಭವಾದರೆ ಸಾವಿರಾರು ಜನ ನಿರುದ್ಯೋಗಿ ಯುವಕರಿಗೆ ಉದ್ಯೋಗ ದೊರಕಿ ರಾಜ್ಯದ ಹಾಗೂ ರಾಷ್ಟ್ರದ ನಿರುದ್ಯೋಗ ಸಮಸ್ಯೆ ನಿವಾರಣೆಯಾದಂತಾಗುತ್ತದೆ. ಇಂತಹ ಉತ್ತಮ ಕೆಲಸಗಳನ್ನು ಮಾಡುವುದರಿಂದ ದೇಶ ಹಾಗೂ ರಾಜ್ಯದ ಸಂಪತ್ತು ಹೆಚ್ಚಾಗಿ ರಾಷ್ಟ್ರ ಮುಂದುವರಿಯಲು ಸಾಕಷ್ಟು ಅವಕಾಶವಾಗುತ್ತದೆಂದು ಭಾವಿಸಿ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ನಾಲ್ಕಾರು ಮಾತುಗಳನ್ನು ಮುಗಿಸುತ್ತೇನೆ.